# ಮುಟ್ಟು, ಪೂರ್ವಗ್ರಹಗಳ ಬಿಟ್ಟು...

**ದಟ್ಟ ಮಂಜಿನೆದೆಯೊಳಗೆ ಹುದುಗಿರುವ ಹೃದಯಗಳಂತೆ ಭಾಸವಾಗುತ್ತಿದ್ದ ಬೆಟ್ಟ ಸಾಲುಗಳ, ಕಡುಹಸುರು ಮರಗಳ ಗುವಾಹಟಿ, ಶಕ್ತಿದೇವತೆ ಕಾಮಾಕ್ಯ ಕಾರಣದಿಂದಲೂ ಪ್ರಸಿದ್ಧ. ಮಹಿಳೆಯಲ್ಲಿನ ಅಂತಃಶಕ್ತಿಯನ್ನು ಪ್ರತಿನಿಧಿಸುವ ದೇವತೆ ಈ ಕಾಮಾಕ್ಯ.**

**■ ಕಲಾವತಿ ಬೈಚಬಾಳ**



ಶಕ್ತಿಪೀಠ
ಕಾಮಾಕ್ಯ ದೇಗುಲ

ಅದ್ಭುತ ಸಾಹಿತ್ಯ, ಸಂಸ್ಕೃತಿ, ಪ್ರಾಕೃತಿಕ ಸಂಪತ್ತಿಗೆ ಹೆಸರಾಗಿರುವ ಸಪ್ತ ಸೋದರಿಯರ ನಾಡಿನಲ್ಲಿ ಒಂದಾದ (ಈಶಾನ್ಯ ರಾಜ್ಯಗಳು – ಮೇಘಾಲಯ, ತ್ರಿಪುರಾ, ಮಿಜೋರಾಮ್, ಮಣಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ) ಅಸ್ಸಾಂ ಉಳಿದ ಎಲ್ಲಾ ರಾಜ್ಯಗಳಿಗಿಂತ ಹೆಚ್ಚು ಬುಡಕಟ್ಟು ಜನಾಂಗಗಳಿಗೆ ಆಶ್ರಯ ನೀಡಿದೆ.

ಆರ್ಯನ್ನರು, ಅನಾರ್ಯರು ಮತ್ತು ಇಂಡೊ–ಇರಾನಿಯನ್ ಎಂದು ವಿಭಜಿಸಲಾಗಿದ್ದು, ಇದರೊಂದಿಗೆ ಬೋಡೋ, ಕಾರ್ಬಿ, ರಾಜಬನ್ಸಿ, ಮಿರಿ, ಮಿಶಿಮ ಮತ್ತು ರಭ ಮುಂತಾದ ಬುಡಕಟ್ಟುಗಳೂ ಇಲ್ಲಿ ನೆಲೆ ಪಡೆದುಕೊಂಡಿವೆ. ಇದರೊಂದಿಗೆ ಗಿರಿಧಾಮಗಳ ನಗರಿ ಅಸ್ಸಾಂ, ಪುರಾತನ ದೇವಾಲಯಗಳ ನಾಡು ಕೂಡ ಹೌದು. ಎಲ್ಲಿ ನೋಡಿದರೂ ಶಿವನ ದೇವಾಲಯಗಳೇ ಇದ್ದು, ಐತಿಹ್ಯಗಳಿಗೆ ಪ್ರಸಿದ್ಧವಾಗಿವೆ.

ಆ ದಿನ, ನಸುಕಿನ ಐದು ಗಂಟೆಗೆ ಒಂದೇ ಸಮನೆ ಅಲಾರ್ಮ್ ಬಡಿದುಕೊಂಡು ನಮ್ಮನ್ನು ಎಬ್ಬಿಸಿತು. ತಡರಾತ್ರಿ ಒಂದು ಗಂಟೆಗೆ ನಿದ್ದೆಗೆ ಜಾರಿದ್ದ ನಮಗೆ ಕಣ್ಣುರಿ. ವಿಪರೀತ ಚಳಿಯಿಂದಾಗಿ ಬೆಚ್ಚಗೆ ತಬ್ಬಿದ್ದ ಹೊದಿಕೆ ಬದಿಗೆ ಸರಿಸಲು ಮನಸ್ಸೇ ಆಗಲಿಲ್ಲ. ಪಿಳಪಿಳನೆ ರೆಪ್ಪೆ ಸಡಿಲಿಸುತ್ತ, ಮುಖ ಕಿವುಚುತ್ತಲೆ ರಗ್ಗಿನಿಂದಾಚೆ ಇಣುಕಿದೆ. ಮಂಜುಗಡ್ಡೆಯಂತಾಗಿದ್ದ ನೆಲಕ್ಕೆ ಪಾದವೂರಿದಾಗ ನರನಾಡಿ ಕಂಪಿಸಿದವು. ಗುವಾಹಟಿಯ ಚಳಿಯ ರಾಗ ಅನುಭವಕ್ಕೆ ಬಂತು. ನಾವಿದ್ದ ರೂಮಿನಲ್ಲಿ ಬಿಸಿನೀರು ಸಹ ಸರಿಯಾಗಿ ಬರುತ್ತಿರಲಿಲ್ಲ. ನಡುಗುವ ಮೈಯ ತಣ್ಣೀರಿಗೊಡ್ಡಿ ರೆಡಿ ಆದೆವು.



ಬ್ರಹ್ಮಪುತ್ರ ನದಿ ತೀರದ ದೃಶ್ಯ

ನಮಗಾಗಿ ಪ್ರೊ. ಮಾಧುರಿ (ಹೈದ್ರಾಬಾದ್) ಅದಾಗಲೇ ತಯಾರಾಗಿ ಕಾಯುತ್ತಿದ್ದರು. ಕಣ್ಣು ಹಾಯಿಸಿದಷ್ಟು ದೂರ ಇಬ್ಬನಿ ಇಳೆಯ ತಬ್ಬಿತ್ತು. ಐದಾರು ಅಡಿ ದೂರದ ಜನರಷ್ಟೇ ಕಾಣುತ್ತಿದ್ದರು. ಮಂಜಿನ ಅಲೆಗಳು ಕಣ್ಮುಂದೆ ಹಾದು, ತೇಲಿ ಹೋದಂತೆ ಭಾಸವಾಗುತ್ತಿತ್ತು. ಕ್ಯಾಬ್ ಬುಕ್ ಮಾಡೋದ್ರಲ್ಲೇ ಮುಕ್ಕಾಲು ಗಂಟೆ ಸಮಯ ಕಳೆಯಿತು. ಸಿಗದ ಕ್ಯಾಬ್‌ಗಾಗಿ ಕಾಯುವ ಬದಲು ಮುಂದೆ ಆಟೊ ಸಿಗಬಹುದೇನೋ ನೋಡೋಣ ಎಂದು ಒಂದು ಕಿ.ಮೀ. ಇಳಿಜಾರಿನ ಬೆಟ್ಟದ ಹಾದಿ ಇಳಿದು ಬಂದೆವು. ಅಲ್ಲಿ ಆಟೊ ಹಿಡಿದೆವು. ನಮ್ಮನ್ನು ಸೇರಿ ಆರು ಜನರಿದ್ದ ಪುಟ್ಟ ಆಟೊ ಹೊಗೆ ಬಿಡುತ್ತಲೇ ಪಾನ್ ಬಜಾರ್‌ಗೆ ಬಂದಿತು. ಅಲ್ಲಿಂದ ಕ್ಯಾಬ್ ಬುಕ್ ಮಾಡಿಕೊಂಡು, ಎಂಟು ಗಂಟೆ ಹೊತ್ತಿಗೆ ನಾವು ಬಂದಿಳಿದಿದ್ದೇ ಭಾರತದ 52 ಶಕ್ತಿಪೀಠಗಳ ಪೈಕಿ ಒಂದಾದ, ಗುವಾಹಟಿ ನಗರದ ಪಶ್ಚಿಮ ಭಾಗದ ನೀಲಾಚಲ ಬೆಟ್ಟದ ತುದಿಯಲ್ಲಿರುವ ಕಾಮಾಕ್ಯ ದೇವಸ್ಥಾನಕ್ಕೆ. ಈ ದೇವಸ್ಥಾನ ಅಸ್ಸಾಂನ ಹೆಗ್ಗುರುತು ಕೂಡಾ ಹೌದು.

ಈ ದೇವಸ್ಥಾನದ ಗರ್ಭಗುಡಿ ಸ್ವಾಭಾವಿಕ ನೆಲದಡಿಯ ಚಿಲುಮೆಯನ್ನು ಹೊಂದಿದ್ದು, ಅದು ತಳಬಂಡೆಯಲ್ಲಿ ಯೋನಿ ಆಕಾರದ ಸೀಳಿನ ಮೂಲಕ ಹರಿಯುತ್ತದೆ. ಪ್ರತಿ ಬೇಸಿಗೆಯಲ್ಲಿ ಅಂಬುವಾಸಿ ಹಬ್ಬದ ಸಂದರ್ಭದಲ್ಲಿ, ಕಾಮಾಕ್ಯ ತಾಯಿಯ ಋತುಚಕ್ರವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ, ಮುಖ್ಯ ದೇವಾಲಯದಲ್ಲಿನ